# ಕರ್ನಾಟಕ ಸರ್ಕಾರ

## 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.

## ಸಿ.ಸಿ.ನಂ.728/2019

ಪಿ.ಡಬ್ಲ್ಯೂಃ **3**

ಸಿ.ಡಬ್ಲ್ಯೂಃ **10**

| | | |
|---|---|---|
| ಹೆಸರು | ಃ | ಪ್ರಕಾಶ ಬಿ |
| ತಂದೆಯ ಹೆಸರು | ಃ | ಕೆ ಎನ್ ಬಸಪ್ಪ |
| ವಯಸ್ಸು | ಃ | 49 ವರ್ಷ |
| ಉದ್ಯೋಗ | ಃ | ಹೆಚ್ ಸಿ 127 |
| ವಾಸಸ್ಥಳ | ಃ | ಸಖರಾಯಪಟ್ಟಣ |

**ದಿನಾಂಕಃ 09-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ.**

ನಾನು **2015** ರಿಂದ **2021** ರವರೆಗೆ ವರ್ಷಗಳಿಂದ ಲಕ್ಕವಳ್ಳಿ **ಪೋಲೀಸ್ ಠಾಣೆಯಲ್ಲಿ** ಮುಖ್ಯ ಪೇದೆಯಾಗಿ **ಆಗಿ ಕರ್ತವ್ಯ** ನಿರ್ವಹಿಸಿರುತ್ತೇನೆ.

ದಿನಾಂಕಃ 25-02-2019 ರಂದು ನಾನು ಲಕ್ಕವಳ್ಳಿ ಪೊಲೀಸ್ ಠಾಣೆಯಲ್ಲಿ ಎಸ್ ಹೆಚ್ ಒ ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು ಚಾಸಾ-5 ರಿಂದ 7 ರವರೊಂದಿಗೆ ಯೋಗೀಶ್ ಎಂಬ ವ್ಯಕ್ತಿ, ಮಾಲು, ಮಹಜರ್ ವರದಿಯನ್ನು ತಂದು ಹಾಜರುಪಡಿಸಿದ್ದು, ವರದಿಯನ್ನು ಸ್ವೀಕರಿಸಿ, ಠಾಣಾ ಮೊಕದ್ದಮೆ ಸಂಖ್ಯೆ 12/2019 ಕಲಂ 32, 34 ಕೆ ಇ ಆಕ್ಟ್ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿ, ಆರೋಪಿಯ ವಿರುದ್ಧ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಚಾಸಾ-5 ರಿಂದ 8 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-11 ರವರಿಗೆ ನೀಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ವರದಿ ಆಗಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಪ್ರಥಮ ವರ್ತಮಾನ ವರದಿ ಆಗಿದ್ದು, ಸದರಿ ದಾಖಲೆಯನ್ನು ನಿಪಿ-5 ಎಂದು , ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : ಆರೋಪಿತರ ಪರ ವಕೀಲರಿಂದ.</u>**

ಚಾಸಾ-1 ರವರು ನಿಮ್ಮ ಮೇಲಾಧಿಕಾರಿಗಳಾದ ಕಾರಣ ಅವರ ಮಾತು ಕೇಳಿ ಆರೋಪಿ ಮೇಲೆ ಸುಳ್ಳು ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿರುತ್ತಿರಾ ಎಂದರೆ ಸರಿಯಲ್ಲ. ನೀವು ಯಾವುದೇ ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಠಾಣಾ ಅಂಕಿ ಅಂಶಗಳಿಗೋಸ್ಕರ ಸುಳ್ಳು ಪ್ರಥಮ ವರ್ತಮಾನ ವರದಿ ಸಲ್ಲಿಸಿರುತ್ತಿರಾ ಎಂದರೆ ಸರಿಯಲ್ಲ.

**<u>ಮರುವಿಚಾರಣೆ:</u>** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ರವರು, ತರೀಕೆರೆ.